S.S.V.V. Sangha's

Tel : 08359-225118

# SHRI G.R.GANDHI ARTS, SHRI Y.A.PATIL COMMERCE & SHRI M.F.DOSHI SCIENCE DEGREE COLLEGE, INDI- 586 209

NAAC RE-ACCREDITED AT THE 'B' LEVEL IN 3rd CYCLE

College Code-5225

Email : pplgrgindi@gmail.com

INDI-586209 Dist : VIJAYAPUR(Karnataka)

Web site :www grgayapcci.org

Date :




## CRITERION VII - INSTITUTIONAL VALUES AND BEST PRACTICES

### 7.1.11 - Institution celebrates / organizes national and international commemorative days, events and festivals

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.
INDI-586209. Dist: Vijayapur.

**7.1.11 - Institution celebrates / organizes national and international commemorative days, events and festivals**

**ANNUAL REPORT OF THE CELEBRATIONS AND COMMEMORATIVE EVENTS 2021-22**

| SI. NO | EVENT NAME | DATE | GUEST OF THE EVENT | NO.OF STUDENTS |
|---|---|---|---|---|
| 01 | National Service Scheme Day | 24.09.2021 | Dr.Ramesh Kamble | 55 |
| 02 | Constitution day | 26.11.2021 | Prof.B.S.Patted | 95 |
| 03 | Subas Chandra Bose Jayanti | 24.01.2022 | Shri.Y.G.Biradar | 115 |
| 04 | Republic Day | 26.01.2022 | Shri.P.S.Bagali | 200 |
| 05 | D.R.Bendre Jayanti | 31.01.2022 | Shri.S.S.Irankeri | 70 |
| 06 | International Women's Day | 08.03.2022 | Kumari.S.K.Bhagyashri | 85 |
| 07 | Environment Day | 06.06.2022 | Shri.S.B.Jadav | 50 |
| 08 | Yoga Day | 21.06.2022 | Shri.B.S.Patil | 70 |
| 09 | Independence Day | 15.08.2022 | Shri.P.S.Bagali | 115 |
| 10 | Rastriya Ekata Divas | 31.10.2022 | Dr.Jayprasad D | 62 |
| 11 | Kanakdas Jayanti | 11.11.2022 | Shri.Shrishail.G.Sannakki | 80 |
| 12 | Constitution Day | 26.11.2022 | Shri.Ishwar.S.M | 90 |
| 13 | Aids Day | 02.12.2022 | Shri.S.M.Ishwar | 55 |
| 14 | National Maths Day | 22.12.2022 | Shri.Dattatrey Hadpad | 55 |
| 15 | Savitribai pule Jayanti | 03.01.2022 | Mrs.Suma.Patil | 50 |
| 16 | Onake obavva Jayanti | 11.11.2021 | Dr. Jayaprasad D | 62 |
| 17 | National Science day | 28.02.2022 | Dr. Girija. Nimbal | 150 |
| 18 | Leagal awareness day | 26.11.2022 | Shri.Ishwar S M | 45 |

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.
INDI-586209. Dist: Vijayapur.

Sri Y.A.P. Commerce, M.F.D. Science College
INDI
5225
Sri G.R.G. Arts

# ಗಣರಾಜ್ಯೋತ್ಸವ ದಿನಾಚರಣೆಯ ವರದಿ

ದಿನಾಂಕ: 26.01.2022 ರಂದು ನಗರದ ಎಸ್.ಎಸ್.ವ್ಹಿ.ವ್ಹಿ ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ. ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಂ.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ 'ಗಣರಾಜ್ಯೋತ್ಸವದ ಧ್ವಜಾರೋಹಣ'ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮಹಾನ್ ನಾಯಕರಾದ ಮಹಾತ್ಮಾಗಾಂಧಿ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರರವರ ಭಾವಚಿತ್ರಕಕ್ಕೆ ಪುಷ್ಪನಮನ ಸಲ್ಲಿಸಿ, ಗಣರಾಜ್ಯೋತ್ಸವದ ದಿನಾಚರಣೆಯ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ್ಯರಾದ ಶ್ರೀ.ಎಮ್.ಎಫ್.ದೋಶಿರವರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀ.ಪ್ರಭಾಕರ ಎಸ್.ಬಗಲಿರವರು ಮಾತನಾಡುತ್ತ 'ದೇಶದ ಪ್ರಜ್ಞಾವಂತ ನಾಗರಿಕರಾದ ನಾವು ಜಾತಿ, ಮತ, ಧರ್ಮ, ಭಾಷೆ, ಸಂಸ್ಕೃತಿಗಳ ಭಿನ್ನತೆಯನ್ನು ಮರೆತು ಏಕತೆ ಮತ್ತು ಸೃಜನಶೀಲ ಮನೋಭಾವದೊಂದಿಗೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಬೇಕು.' ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಇನ್ನೋರ್ವ ಅತಿಥಿಯಾದ ಸಂಸ್ಥೆಯ ನಿರ್ದೇಶಕರಾದ ಶ್ರೀ.ಅಜೀತ ಧನಶೆಟ್ಟಿ ರವರು ಮಾತನಾಡುತ್ತ 'ಇಂದು ನಾವು ಭಾರತದ ಪ್ರಮುಖ ಐತಿಹಾಸಿಕ ದಿನವಾದ 73 ನೇ ಗಣರಾಜ್ಯೋತ್ಸವ ದಿನವನ್ನು ಆಚರಿಸಲು ಸೇರಿದ್ದೇವೆ. ಇಂದು ನಮ್ಮ ದೇಶದ ಬಗ್ಗೆ ಮತ್ತು ಸಂವಿಧಾನ ಜಾರಿಗೆ ಬಂದ ದಿನದ ಬಗ್ಗೆ ಸವಿನೆನಪು ಮಾಡಿಕೊಳ್ಳಲು ತುಂಬಾ ಕುತೂಹಲವಾಗುತ್ತದೆ. ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ, ಏಕತೆ, ಭಾತೃತ್ವ ಸ್ವಾತಂತ್ರ್ಯ ಭಾರತದ ಸಂವಿಧಾನದಲ್ಲಿ ಇರುವ 5 ಪ್ರಮುಖ ಮೌಲ್ಯಗಳು.' ಎಂದು ಹೇಳಿದರು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ.ಎಸ್.ಬಿ.ಜಾಧವರವರು ಸ್ವಾಗತ ಮಾಡಿದರು. ಡಾ.ವಿಶ್ವಾಸ ಕೋರವಾರರವರು ನಿರೂಪಿಸಿದರು. ಡಾ.ಸಿ.ಎಸ್.ಬಿರಾದಾರ ರವರು ವಂದಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ನೀಲಕಂಠಗೌಡ ಎಸ್. ಪಾಟೀಲ, ಸಹಕಾರ್ಯದರ್ಶಿಗಳಾದ ಶ್ರೀ ಸಿದ್ದಣ್ಣ ತಾಂಬೆ, ನಿರ್ದೇಶಕರುಗಳಾದ ಶ್ರೀ.ಬಿ.ವಾಯ್ ಪಾಟೀಲ, ಶ್ರೀ.ಎಸ್ಆರ್.ಗಾಂಧಿ, ಶ್ರೀ.ಸಿ.ಎ.ದೇವರ, ಶ್ರೀ.ಎಸ್.ಎಸ್.ಯರೋಳಿ, ಶ್ರೀ.ಎಸ್.ಎಮ್.ತೆನ್ನಳ್ಳಿ, ಶ್ರೀ.ವ್ಹಿ.ಎ.ದೋಶಿ, ಹಾಗೂ ಮಹಾವಿದ್ಯಾಲಯದ ಬೋಧಕ/ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur

# 76 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ವರದಿ

ದಿನಾಂಕ: 15.08.2022 ರಂದು ನಗರದ ಎಸ್.ಎಸ್.ವ್ಹಿ.ವ್ಹಿ ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ. ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಂ.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ '76 ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ'ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮಹಾನ್ ನಾಯಕರಾದ ಮಹಾತ್ಮಾಗಾಂಧಿ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರರವರ ಭಾವಚಿತ್ರಕಕ್ಕೆ ಪುಷ್ಪನಮನ ಸಲ್ಲಿಸಿ, 76 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಧ್ವಜಾರೋಹಣವನ್ನು ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀ.ಪ್ರಭಾಕರ ಎಸ್. ಬಗಲಿರವರು ನೆರವೇರಿಸಿ, 'ದೇಶಕ್ಕಾಗಿ ಹೋರಾಡಿ ಮಡಿದ ಮಹಾನ್ ನಾಯಕರನ್ನು ಸ್ಮರಿಸಿಕೊಳ್ಳುತ್ತ, ಭಾರತ ದೇಶದ ಉನ್ನತಿಗಾಗಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿಗಳಾದ ತಾವು ಒಳ್ಳೆಯ ವಿದ್ಯಾರ್ಜನೆಯನ್ನು ಮಾಡಿ ದೇಶವನ್ನು ಉನ್ನತ ಸ್ಥಿತಿಗೆ ತರಲು ಶ್ರಮಿಸುಬೇಕು' ಎಂದು ತಿಳಿಸಿದರು.

ಈ ಸಂಸ್ಥೆಯ ಸಹಕಾರ್ಯದರ್ಶಿಗಳಾದ ಶ್ರೀ ಸಿದ್ದಣ್ಣ ತಾಂಬೆರವರು ಮಾತನಾಡುತ್ತ 'ದೇಶದ ಏಳಿಗೆಗಾಗಿ ವಿದ್ಯಾರ್ಥಿಗಳು ಪ್ರಮುಖ ಪಾತ್ರವಹಿಸುತ್ತಾರೆ. ದೇಶದ ಪ್ರಜ್ಞಾವಂತ ನಾಗರಿಕರಾದ ನಾವು ಜಾತಿ, ಮತ, ಧರ್ಮ, ಭಾಷೆ, ಸಂಸ್ಕೃತಿಗಳ ಭಿನ್ನತೆಯನ್ನು ಮರೆತು ಏಕತೆ ಮತ್ತು ಸೃಜನಶೀಲ ಮನೋಭಾವದೊಂದಿಗೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಬೇಕು.' ಎಂದು ತಿಳಿಸಿದರು


ಈ ಸಂಸ್ಥೆಯ ನಿರ್ದೇಶಕರಾದ ಶ್ರೀ ವರ್ಧನ ದೋಶಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಈ ಕಾರ್ಯಕ್ರದಲ್ಲಿ ಅಜಾಧಿ ಕಾ ಅಮೃತ ಮಹೋತ್ಸವ ಅಂಗವಾಗಿ ಹಮ್ಮಿಕೊಂಡ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೆ ಸಿಂದಗಿಯಲ್ಲಿ ನಡೆದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮೂರನೆಯ ವಲಯ ಮಟ್ಟದ ಪುರುಷ ವಾಲಿಬಾಲ್ ಪಂದಯಾವಳಿಯಲ್ಲಿ ಭಾಗವಹಿಸಿ ಮೂರನೆಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ.ಎಸ್.ಬಿ.ಜಾಧವರವರು ಸ್ವಾಗತ ಮಾಡಿದರು. ಶ್ರೀ.ಶ್ರೀಶೈಲರವರು ನಿರೂಪಿಸಿದರು. ಡಾ.ಸುರೇಂದ್ರ ಕೆ ರವರು ವಂದಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರುಗಳಾದ ಶ್ರೀ.ಬಿ.ವಾಯ್ ಪಾಟೀಲ, ಶ್ರೀ.ಎಸ್ಆರ್.ಗಾಂಧಿ, ಶ್ರೀ.ಸಿ.ಎ.ದೇವರ, ಶ್ರೀ.ಎಸ್.ಎಸ್.ಶಿರಕನಳ್ಳಿ, ಶ್ರೀ.ಎಸ್.ಎಮ್.ತೆನ್ನಳ್ಳಿ, ಹಾಗೂ ಮಹಾವಿದ್ಯಾಲಯದ ಎಲ್ಲ ಬೋಧಕ/ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commer
& Shri M.F.Doshi Science Degree College




Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

## ಕನಕದಾಸರ ಜನ್ಮ ದಿನಾಚರಣೆ ಕಾರ್ಯಕ್ರಮದ ವರದಿ

ದಿನಾಂಕ 11/11/2022 ರಂದು ಇಂಡಿ ಪಟ್ಟಣದ ಎಸ್.ಎಸ್.ವಿ.ವಿ ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಕನಕದಾಸರ 535 ಜನ್ಮ ದಿನಾಚರಣೆ_ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಮಹಾವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ.ಶ್ರೀಶೈಲ ಅವರು ಮಾತನಾಡುತ್ತಾ "ಕನ್ನಡ ಕೀರ್ತನೆ ಸಾಹಿತ್ಯದ ಪ್ರಮುಖ ಕಿರ್ತನಾಕಾರರಲ್ಲಿ ಕನಕದಾಸರು ಒಬ್ಬರು, ಹರಿದಾಸ ಸಾಹಿತ್ಯದ ಅಗ್ರಗಣ್ಯರು ಹದಿನಾರನೇ ಶತಮಾನದ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ, ಅಸ್ಪೃಶ್ಯತೆ, ಮೇಲು–ಕೀಳು ಭಾವನೆಗಳನ್ನು ತಮ್ಮ ಕೃತಿಗಳಲ್ಲಿ ತೀವ್ರವಾಗಿ ಖಂಡಿಸಿದ್ದಾರೆ. ಕನಕದಾಸರು ಕೇವಲ ಒಬ್ಬ ದಾಸನಲ್ಲ, ಅವನೊಬ್ಬ ಸುಂದರ ಸಾಹಿತ್ಯಕಾರ, ಸಂಗೀತಕಾರ, ಅವನೊಬ್ಬ ಅದ್ಭುತ ಜೀವಿ. ಆ ಕಾಲದಲ್ಲೇ ಶೋಷಣೆಯ ವಿರುದ್ದ ಧ್ವನಿ ಎತ್ತಿದಂತಹ ಒಬ್ಬ ಸಾಮಾಜಿಕ ಹೋರಾಟಗಾರ" ಎಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ.ಎಸ್.ಬಿ.ಜಾಧವ ಮಾತನಾಡುತ್ತಾ "ಕರ್ನಾಟಕದಲ್ಲಿ ಕನಕದಾಸರು 15–16 ನೇ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೆ ಕೆಳ ಪಂಗಡದ ದಾಸರು ಹಾಗೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಾಕಾರರು ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನ್ನಿತಿದವರು" ಎಂದು ಹೇಳಿದರು.


ಈ ಕಾರ್ಯಕ್ರಮದ ನಿರೂಪಣೆಯನ್ನು ಸಹಾಯಕ ಪ್ರಾಧ್ಯಾಪಕರಾದ ಡಾ.ವಿಶ್ವಾಸ ಕೋರವಾರ, ವಂದನಾರ್ಪಣೆಯನ್ನು ಗ್ರಂಥಪಾಲಕರಾದ ಶ್ರೀ ರಾಘವೇಂದ್ರ ಇಂಗನಾಳ, ಸ್ವಾಗತವನ್ನು ಸಹಾಯಕ ಪ್ರಾಧ್ಯಾಪಕರಾದ ಡಾ.ಪಿ.ಕೆ.ರಾಠೋಡ ಅವರು ನಿರ್ವಹಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ /ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.
INDI-586209. Dist: Vijayapur

INDI 5225







Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209 Dist: Vijayapur

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.
INDI-586209. Dist. Vijayapur

5225

## ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮದ ವರದಿ

ದಿನಾಂಕ 02/12/2022 ರಂದು ಇಂಡಿ ಪಟ್ಟಣದ ಎಸ್.ಎಸ್.ವಿ.ವಿ.ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ತಾಲೂಕು ಆಡಳಿತ ಇಂಡಿ, ಜಿಲ್ಲಾ ಏಡ್ಸ್ ನಿರೋಧಕ ಮತ್ತು ನಿಯಂತ್ರಣ ತಾಲೂಕು ಕಾನೂನು ಸೇವೆಗಳ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಏಡ್ಸ್ ನಿರೋಧಕ ಮತ್ತು ನಿಯಂತ್ರಣ ಘಟಕ, ವಿಜಯಪುರ, ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ, ಎನ್.ಎಸ್.ಎಸ್, ರೆಡ್ ಕ್ರಾಸ್, ಸ್ಕೌಟ್ಸ್ & ಗೈಡ್ಸ್, ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಏಡ್ಸ್ ದಿನಾಚರಣೆಯ ಅಂಗವಾಗಿ ಏಡ್ಸ್ ಜಾಗೃತಿ ಜಾಥಾ ಕಾರ್ಯಕ್ರಮ ಜರುಗಿತು.

ಶ್ರೀ.ಈಶ್ವರ ಎಸ್.ಎಮ್. ದಿವಾಣಿ ನ್ಯಾಯಾದೀಶರು ಮತ್ತು ಪ್ರಥಮ ನ್ಯಾಯಿಕ ದಂಡಾಧಿಕಾರಿಗಳು ಇಂಡಿ ಹಾಗೂ ಶ್ರೀ.ದೇವರಾಜು ಎಚ್.ಆರ್. ಹೆಚ್ಚುವರಿ ದಿವಾಣಿ ನ್ಯಾಯಾದೀಶರು ಮತ್ತು ಪ್ರಥಮ ನ್ಯಾಯಿಕ ದಂಡಾಧಿಕಾರಿಗಳು ಇಂಡಿ ಇವರು " 'ಸಮಾನಗೊಳಿಸು' ಅಂದರೆ ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನದಿಂದ ಸಮಾನತೆಗಳನ್ನು ಪರಿಹರಿಸೋಣ ಮತ್ತು ಏಡ್ಸ್‌ನ್ನು ಕೊನೆಗಾಣಿಸೋಣ ಎಂಬ ಘೋಷವಾಕ್ಯವನ್ನು ಹೇಳಿ ಈ ರೋಗ ತಡೆಯುವ ಏಕೈಕ ಮಾರ್ಗವೆಂದರೆ ಜಾಗೃತಿ ಮಾತ್ರ ಹಾಗಾಗಿ ಈ ದಿನ ನಮಗೆ ಒಗ್ಗಟ್ಟಿನಿಂದ ಹೋರಾಡುವ ಅವಕಾಶ ನೀಡಿದೆ. ಈ ಜಾಗೃತಿ ಜಾಥಾ ಜನರ ಮನಸ್ಸನ್ನು ಪರಿವರ್ತಿಸುವಲ್ಲಿ ಯಶಸ್ಸನ್ನು ತರಲಿ" ಎಂದು ಶುಭ ಕೋರಿ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಉದ್ಘಾಟಕರಾದ ಹಾಗೂ ನಮ್ಮ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ.ಎಸ್.ಬಿ.ಜಾಧವ, ಅವರು ಮಾತನಾಡುತ್ತಾ "ಸಮಾಜದಲ್ಲಿ ಹೆಚ್.ಐ.ವ್ಹಿ. ಏಡ್ಸ್ ಸೊಂಕಿನಿಂದ ಉಂಟಾಗುತ್ತಿರುವ ಸಮಸ್ಯೆಗಳು ಮತ್ತು ಇದರ ಬಗ್ಗೆ ಜಾಗೃತಿ ಮೂಡಿಸುವುದು. ಏಡ್ಸ್ ಸೊಂಕಿತರಿಗೆ ಬೆಂಬಲ ನೀಡಿ ಸಮಾಜದಲ್ಲಿ ಅವರು ಅನುಭವಿಸುತ್ತಿರುವ ಕಳಂಕ ತಾರತಮ್ಯವನ್ನು ಕಡಿಮೆ ಮಾಡಿ ಗೌರವಯುತವಾಗಿ ಬದುಕುವಂತೆ ನಾವು ನೀವು ಎಲ್ಲರೂ ಮಾಡಬೇಕು" ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಡಾ॥ ಪ್ರಶಾಂತ ಧೂಮಗೊಂಡ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಚಿಕ್ಕಬೇವನೂರ, ಅವರು ಮಾತನಾಡುತ್ತಾ "ಏಡ್ಸ್ ರೋಗವನ್ನು ನಿಯಂತ್ರಿಸುವ ಕಾರ್ಯವನ್ನು ನಾವು ಮಾಡುತ್ತೇವೆ. ರೋಗ ಹರಡದಂತೆ ಜಾಗೃತಿ ಮೂಡಿಸುವ ಕರ್ತವ್ಯ ನಿಮ್ಮದಾಗಬೇಕು". ನಾವೆಲ್ಲರೂ ಸೇರಿ ರೋಗ ಮುಕ್ತ ಆರೋಗ್ಯಕರ ಸಮಾಜವನ್ನು ನಿರ್ಮಿಸುವ ಕಾರ್ಯವನ್ನು ಮಾಡೋಣವೆಂದು ಹೇಳಿದರು.

ಈ ಕಾರ್ಯಕ್ರಮದ ಅತಿಥಿ ಉಪನ್ಯಾಸ ನೀಡಿದ ವಾಯ್.ಎಮ್.ಪೂಜಾರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಚಿಕ್ಕಬೇವನೂರ ರವರು ಸಮಾಜದಲ್ಲಿ ಇಂದು 18 ರಿಂದ 30 ರ ಹದಿಹರೆಯದ ಯುವಕ–ಯುವತಿಯರಲ್ಲಿ ಹೆಚ್ಚಾಗಿ ಏಡ್ಸ ಸೋಂಕು ಹರಡುತ್ತಿರುವುದಕ್ಕೆ ಮುಖ್ಯ ಕಾರಣ ತಂದೆ–ತಾಯಂದಿರು, ಗುರು–ಹಿರಿಯರು ಲೈಂಗಿಕತೆಯ ಬಗ್ಗೆ ಮಕ್ಕಳ ಜೊತೆ ಉಬಯಕುಶಲೋಪರಿಯಾಗಿ ಮಾತನಾಡದೇ ಇರುವುದೇ ತಪ್ಪು. ಅಜ್ಞಾನದಂಧಕಾರದಲ್ಲಿ ಸಾವಿನಂಚಿಗೆ ನಾವೇ ದೂಡುತ್ತಿದ್ದೇವೆ. ಹಾಗಾಗಿ ಲೈಂಗಿಕತೆ ಬಗ್ಗೆ ಮಕ್ಕಳಲ್ಲಿ ಮುಕ್ತವಾಗಿ ಮಾತಾಡಿ ದಾರಿ ತಪ್ಪದೆ ಭವಿಷ್ಯ ರೂಪಿಸಿಕೊಳ್ಳುವ ಕಡೆಗೆ ಗಮನ ಕೊಡುವಂತೆ ಮಾಡುವ ಜವಬ್ದಾರಿ ಹಿರಿಯರಾದ ನಮ್ಮ ಮೇಲಿದೆ ಎಂದರು.

ಡಾ॥ ರಾಜೇಶ ಕೋಳೇಕರ, ಆಡಳಿತ ವೈದ್ಯಾಧಿಕಾರಿಗಳು ತಾಲೂಕಾ ಆಸ್ಪತ್ರೆ ಇಂಡಿ ಇವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ.ಕೆ.ಜಿ.ಶೀಲವಂತ ಪ್ರಾರ್ಥನಾ ಗೀತೆಯನ್ನು ಶ್ರೀ ಗಂಗಾಧರ, ಸ್ವಾಗತ ಮತ್ತು ಪರಿಚಯ ಸಹಾಯಕ ಪ್ರಾಧ್ಯಾಪಕರಾದ ಡಾ.ವಿಶ್ವಾಸ ಕೋರವಾರ, ವಂದನಾರ್ಪಣೆಯನ್ನು ಶ್ರೀ.ಸೋಮನಿಂಗ ಬಿರಾದಾರ ಅವರು ನಿರ್ವಹಿಸಿದರು.

ಈ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀ.ಎಸ್.ಆರ್.ಬಿರಾದಾರ, ಶ್ರೀ.ಎಸ್.ಎಚ್.ಅತನೂರ, ಶ್ರೀ.ಪಿ.ಡಿ.ಉಪಾಧ್ಯಾಯ ಇವರು ಉಪಸ್ಥಿತರಿದ್ದರು.


ಈ ಕಾರ್ಯಕ್ರಮದಲ್ಲಿ ರಾಘವೇಂದ್ರ ಬಿರಾದಾರ. ಸೋಮಣ್ಣ ಸಜ್ಜನ, ಹಾಗೂ ಕೆಎಚ್‌ಪಿಟಿಯ ಎಲ್‌ಡಬ್ಲೂಎಸ್ ಸಿಬ್ಬಂದಿಗಳು, ಎಆರ್‌ಟಿ ಹಾಗೂ ಆಯ್‌ಸಿಟಿಸಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ/ಬೋಧಕೇತರ ಸಿಬ್ಬಂಧಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College
INDI-586209. Dist: Vi...

Principal
Shri G.R.Gandhi Arts, Shri Y.A.Patil Commerce
Shri M.F.Doshi Science Degree College.

INDI
5225
G.Arts, Sri Y. ... Science Degree





Co-Ordinator
I.Q.A.C.
...ri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College
INDI-586209. Dist: Vijaya...

## ಸುಭಾಷಚಂದ್ರ ಭೋಸರ 125ನೇ ಜಯಂತಿ ಕಾರ್ಯಕ್ರಮದ ವರದಿ

ದಿನಾಂಕ 24/01/2022 ರಂದು ಇಂಡಿ ಪಟ್ಟಣದ ಎಸ್.ಎಸ್.ವಿ.ವಿ.ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಆಯ್‌ಕ್ಯೂಎಸಿ, ಎನ್.ಎಸ್.ಎಸ್, ಯುತ್ ರೆಡ್‌ಕ್ರಾಸ್ ಹಾಗೂ ಸ್ಕ್ಯಾಟ್ಸ್ & ಗೈಡ್ಸ್ ಘಟಕಗಳ ಅಡಿಯಲ್ಲಿ 'ಸುಭಾಷಚಂದ್ರ ಭೋಸರ' ಜನ್ಮ ದಿನಾಚರಣೆ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀ.ವಾಯ್.ಜಿ.ಬಿರಾದಾರ ಸಹಶಿಕ್ಷಕರು, ಶ್ರೀ ಯಲ್ಲಾಲಿಂಗೇಶ್ವರ ಪ್ರೌಡಶಾಲೆ ಮಿರಗಿ, ಅವರು ಮಾತನಾಡುತ್ತಾ "ಭಾರತ ದೇಶ ಕಂಡ ಅಪ್ರತಿಮ ದೇಶಭಕ್ತ ನಮ್ಮೆಲ್ಲರ ಪ್ರೀತಿಯ ನೇತಾಜಿ ಸುಭಾಷಚಂದ್ರ ಭೋಸರ 125 ನೇ ಜನ್ಮ ದಿನದ ಅಂಗವಾಗಿ ನಾವೇಲ್ಲರೂ ಸೇರಿದ್ದು, 'ನೀವು ರಕ್ತ ಕೊಡಿ, ನಾನು ನಿಮಗೆ ಸ್ವತಂತ್ರ್ಯ ಕೊಡುತ್ತೇನೆ.' ಎಂದು ಅಂಡಮಾನ್ ನಿಕೋಬಾರ್ ಪ್ರದೇಶಗಳನ್ನು ವಶಕ್ಕೆ ತೆಗೆದುಕೊಂಡು ದೇಶವನ್ನು ಪ್ರಥಮ ಬಾರಿಗೆ ಬ್ರೀಟಿಷರ ದಾಸ್ಯದಿಂದ ಮುಕ್ತ ಮಾಡಿದ್ದ ಭಾರತ ಮಾತೆಯ ನಿಜವಾದ ವೀರಪುತ್ರ ಹಾಗೂ ಸದಾ ಕ್ರಿಯಾಶೀಲರಾಗಿದ್ದು ದೇಶಕ್ಕಾಗಿ ತಮ್ಮ ಬದುಕನ್ನೇ ಮುಡುಪಿಟ್ಟ ಈ ವೀರ ಸೇನಾನಿ. 'ಸ್ವಾತಂತ್ರ್ಯ ಯಾರು ಕೊಡುವುದಿಲ್ಲ ಅದನ್ನು ನಾವೇ ಪಡೆದುಕೊಳ್ಳಬೇಕು' ಎಂಬ ಅವರ ಮಾತು ಇಂದಿನ ಯುವಕರಲ್ಲಿ ಹೋರಾಟದ ಕಿಚ್ಚನ್ನು ಹಚ್ಚುವಂತಹದ್ದಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿದ ಮಹಾನ್ ನಾಯಕನ ಜಯಂತಿಯನ್ನು ಆಚರಿಸುವುದರ ಜೊತೆಗೆ ಸ್ವಾತಂತ್ರ್ಯ ನಮಗೆ ಸಿಕ್ಕಿದ್ದಲ್ಲ, ಅದನ್ನು ನಾವು ಗಳಿಸಿಕೊಂಡಿದ್ದು. ಅದನ್ನು ನಾವು ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ." ಎಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ನಮ್ಮ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ.ಎಸ್.ಬಿ.ಜಾಧವ ಅವರು 'ನೇತಾಜಿ ಸ್ಮರಣೆ, ನೇತಾಜಿ ಸಾಹಸಿ' ಸ್ವರಚಿತ ಕವನ ವಾಚನ ಮಾಡುತ್ತ ಮಾತನಾಡಿದರು.

ಈ ಕಾರ್ಯಕ್ರಮದ ಅಂಗವಾಗಿ ಭಾಷಣ ಸ್ಪರ್ಧೆ ಹಮ್ಮಿಕೊಳ್ಳಲಾಗಿದ್ದು, ಇದರಲ್ಲಿ ಪ್ರಥಮ ಸ್ಥಾನ ಕಾಮನಗೌಡ ಬಿರಾದಾರ, ದ್ವಿತೀಯ ಸ್ಥಾನ ಗೀತಾ ಕರಬಂಟನಾಳ ಮತ್ತು ತೃತೀಯ ಸ್ಥಾನ ನಿಖತ ತೆನ್ನಳ್ಳಿ ಪಡೆದುಕೊಂಡರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಕುಮಾರಿ.ಸೋನಾಲಿ ಗೋಡಕೆ, ಪ್ರಾರ್ಥನಾ ಗೀತೆ ಐಶ್ವರ್ಯ ಕಂಬಾರ, ಸ್ವಾಗತ ಮತ್ತು ಪರಿಚಯವನ್ನು ಎನ್.ಎಸ್.ಎಸ್ ಅಧಿಕಾರಿಗಳಾದ ಡಾ.ವಿಶ್ವಾಸ ಕೋರವಾರ ವಂದನಾರ್ಪಣೆಯನ್ನು ಪ್ರೀಯಂಕಾ ಚವ್ಹಾಣ ಅವರು ನಿರ್ವಹಿಸಿದರು.

ಈ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀ.ಎಸ್.ವ್ಹಿ.ಹೊನ್ನಾಕಟ್ಟಿ, ನ್ಯಾಕ್ ಸಂಯೋಜಕರಾದ ಡಾ.ಪಿ.ಕೆ.ರಾಠೋಡ, ಹಾಗೂ ಸ್ಕೌಟ್ಸ್ & ಗೈಡ್ಸ್ ಮುಖ್ಯಸ್ಥರು ಶ್ರೀ.ಶ್ರಿಕಾಂತ ರಾಠೋಡ ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College







Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,

<u>ದ.ರಾ.ಬೇಂದ್ರೆ ಜನ್ಮ ದಿನಾಚರಣೆ ಕಾರ್ಯಕ್ರಮದ ವರದಿ</u>

ದಿನಾಂಕ ೩೧/೦೧/೨೦೨೨ ರಂದು ಇಂಡಿ ಪಟ್ಟಣದ ಎಸ್.ಎಸ್.ವಿ.ವಿ.ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ದ.ರಾ.ಬೇಂದ್ರೆ ರವರ ೧೨೬ ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀಮತಿ ಶಾಲಿನಿ ಎಂ ದೋಶಿ ಮಹಿಳಾ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀ ಸದಾನಂದ ಎಸ್ ಈರನಕೇರಿ ಅವರು ಮಾತನಾಡುತ್ತಾ "ದ್ವಂದ್ವ ಧ್ವನಿಯ ಸಾಂಖ್ಯಿಕ ಅರ್ಥ ನೀಡುವ ಬೇಂದ್ರೆಯವರ ಕಾವ್ಯಗಳನ್ನು ಅರ್ಥೈಸಿಕೊಳ್ಳುವುದು ಕಷ್ಟಸಾಧ್ಯವಿದೆ. ಅವರು ಉತ್ತರ ಕರ್ನಾಟಕದ ಜನಪದ ಭಾಷೆಯನ್ನು ಬಳಸಿಕೊಂಡು ಕಾವ್ಯಗಳನ್ನು ರಚಿಸಿ ಶಬ್ದಗಾರುಡಿಗರಾದರು. ವೈಯಕ್ತಿಕ ಜೀವನವು ಬಹಳ ಕಷ್ಟ-ನಷ್ಟಗಳಿಂದ ತುಂಬಿದ್ದರೂ ಕನ್ನಡ ಸಾಹಿತ್ಯ ಸೇವೆಗೈದಿರುವುದು ಹೆಮ್ಮೆಯ ಸಂಕೇತವಾಗಿದೆ. ಬೇಂದ್ರೆಯವರ ಮನೆಯಲ್ಲಿ ಶಿಷ್ಟಭಾಷೆಯನ್ನು ಅನುಸರಿಸುವ ಪರಂಪರೆಯಿದ್ದರು ಜಾನಪದ ಸೊಗಡಿನಲ್ಲಿ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಭಾರತೀಯ ಸಾಹಿತ್ಯದಲ್ಲಿ ಮುಂಚೂಣಿಗೆ ತಂದಿದ್ದಾರೆ ಎಂದು ಹೇಳುತ್ತಾ ಬೆಂದ್ರೆಯವರ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ.ಎಸ್.ಬಿ.ಜಾಧವ ಮಾತನಾಡುತ್ತ "ಬೇಂದ್ರೆಯವರ ಕಾವ್ಯಗಳು ಜಾನಪದ ಶೈಲಿ ಹಾಗೂ ಗೇಯತೆಯ ಸೊಗಡಿನಿಂದ ಕೂಡಿದ್ದರಿಂದ ಹೆಚ್ಚು ಪ್ರಸಿದ್ಧಿಯನ್ನು ಪಡೆದಿವೆ." ಎಂದು ಹೇಳಿದರು


ಈ ಕಾರ್ಯಕ್ರಮದ ನಿರೂಪಣೆ ವಿದ್ಯಾರ್ಥಿ ಸಚಿನ ಮಾಶ್ಯಾಳಕರ, ಸಹಾಯಕ ಪ್ರಾಧ್ಯಾಪಕರಾದ ಶ್ರೀ ಶ್ರೀಶೈಲ ಸ್ವಾಗತ ಮತ್ತು ಪರಿಚಯ ವಂದನಾರ್ಪಣೆ ವಿದ್ಯಾರ್ಥಿನಿ ಸೋನಾಲಿ ಘೋಡಕೆ ಅವರು ನಿರ್ವಹಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಡಾ.ಎ.ಸಿ.ನಡುವಿನಮನಿ, ಡಾ.ವಿಶ್ವಾಸ ಕೋರವಾರ ,ಡಾ.ಪಿ.ಕೆ.ರಾಠೋಡ, ಡಾ.ಸುರೇಂದ್ರ ಕೆ, ಡಾ.ಸಿ.ಎಸ್.ಬಿರಾದಾರ, ಶ್ರೀ.ಶ್ರೀಕಾಂತ ರಾಠೋಡ, ಶ್ರೀ.ಮಲ್ಲಿಕಾರ್ಜುನ ಕೋಣದೆ, ಶೀ.ಆರ್.ಪಿ.ಇಂಗನಾಳ, ಬೋಧಕ /ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College.

INDI
5225





Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur

# ಅಂತರಾಷ್ಟ್ರೀಯ ಯೋಗ ದಿನಾಚರಣೆಯ ವರದಿ

ದಿನಾಂಕ 21/06/2022 ರಂದು ಇಂಡಿ ಪಟ್ಟಣದ ಎಸ್.ಎಸ್.ವಿ.ವಿ ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಘಟಕ, ರೆಡ್ ಕ್ರಾಸ್, ಸ್ಕೌಟ್ಸ್ & ಗೈಡ್ಸ್ ಹಾಗೂ ಕ್ರೀಡಾ ವಿಭಾಗದ ವತಿಯಿಂದ ಯೋಗಾಸನ ಮಾಡುವ ಮೂಲಕ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

INDI 5225

ಶ್ರೀ ಬಿ.ಎಸ್.ಪಾಟೀಲ ಸಹ ಶಿಕ್ಷಕರು, ಸರಕಾರಿ ಪ್ರೌಢಶಾಲೆ ಇಂಡಿ. ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಯೋಗಭ್ಯಾಸವು ಮನುಷ್ಯನನ್ನು ಆಸ್ಪತ್ರೆಯಿಂದ ದೂರ ಇರಿಸುತ್ತದೆ. ದೈಹಿಕ ಮತ್ತು ಮಾನಸಿಕ ನೆಮ್ಮದಿ ದೊರೆತು ಉಲ್ಲಾಸಮಯ ಜೀವನ ಸಾಗಿಸಲು ನೆರವಾಗುತ್ತದೆ. ಹಾಗಾಗಿ ಯೋಗವು ಮನುಷ್ಯನ ದೇಹ ಮತ್ತು ಆರೊಗ್ಯಕ್ಕೆ ಅತ್ಯವಶ್ಯವಾಗಿದೆ. ಸುರ್ಯನಮಸ್ಕಾರ, ಶಿರ್ಶ್ಯಾಸನ, ಮಯೂರಾಸನ, ಹಲಾಸನ, ಅರ್ಧಕಟಿ ಚಕ್ರಾಸನ ಮುಂತಾದ ಆಸನಗಳು, ಧ್ಯಾನ ಮತ್ತು ಪ್ರಾಣಾಯಾಮ ಮಾಡಿ ಉತ್ತಮ ಆರೋಗ್ಯಕ್ಕಾಗಿ ಪ್ರತಿದಿನ ಯೋಗ ಮಾಡಬೇಕೆಂದು ನುಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಐ.ಕ್ಯೂ.ಎ.ಸಿ ಸಂಯೋಜಕರಾದ ಡಾ.ಜಯಪ್ರಸಾದ ಡಿ. ರವರು ಮಾತನಾಡುತ್ತಾ " ಇಡಿ ವಿಶ್ವಕ್ಕೆ ಯೋಗವನ್ನು ಪರಿಚಯಿಸಿಕೊಟ್ಟಿದ್ದು ಭಾರತ. ಯೋಗ ಎನ್ನುವುದು ಭಾರತೀಯರಿಗೆ ಪರಂಪರಾಗತವಾಗಿ ಗುರು–ಹಿರಿಯರಿಂದ ಬಂದಂತಹ ಉಡುಗೊರೆಯಾಗಿದೆ ಅಲ್ಲದೆ ನಮ್ಮ ಆರೋಗ್ಯಕ್ಕೆ ಸಂಜೀವಿನಿಯಾಗಿದೆ. ಜೀವನದಲ್ಲಿ ಸಂತೋಷ ಮತ್ತು ಆರೋಗ್ಯದ ಜೊತೆಗೆ ಸ್ನೇಹಿತರಾಗಲು ಬಯಸಿದರೆ ನಿತ್ಯ ಯೋಗ ಮತ್ತು ಧ್ಯಾನವನ್ನು ಮಾಡಿರಿ ಆರೋಗ್ಯವಾಗಿರಿ" ಎಂದು ಹೇಳಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಡಾ.ವಿಶ್ವಾಸ ಕೋರವಾರ , ಪ್ರಾರ್ಥನಾ ಗೀತೆಯನ್ನು ಐಶ್ವರ್ಯ ಕಂಬಾರ, ಡಾ.ಸುರೇಂದ್ರ ಕೆ ಸ್ವಾಗತಿಸಿದರು, ಡಾ.ಶ್ರೀಕಾಂತ ರಾಠೋಡ ವಂದನಾರ್ಪಣೆಯನ್ನು ನಿರ್ವಹಿಸಿದರು.

ಈ ಕಾರ್ಯಕ್ರಮದ ವೇದಿಕೆಯಲ್ಲಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಎಸ್.ಬಿ.ಜಾಧವ, ನ್ಯಾಕ ಸಂಯೋಜಕರಾದ ಡಾ. ಪಿ.ಕೆ.ರಾಠೋಡ, ಹಾಗೂ ದೈಹಿಕ ನಿರ್ದೇಶಕರಾದ ಶ್ರೀ ನವೀನಕುಮಾರ ಬಿರಾದಾರ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಡಾ.ಆನಂದ ಸಿ. ನಡುವಿನಮನಿ, ಶ್ರೀ.ಶ್ರೀಶೈಲ, ಡಾ.ಸಿ.ಎಸ್.ಬಿರಾದಾರ, ಶ್ರೀ.ಎಮ್.ಆರ್.ಕೋಣದೆ, ಶ್ರೀ.ಆರ್.ಪಿ.ಇಂಗನಾಳ, ಬೋಧಕ /ಬೋಧಕೇತರರು ಉಪಸ್ಥಿತರಿದ್ದರು.

**Co-Ordinator**
**I.Q.A.C.**
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

**Principal**
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.







Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Commerce
& Shri M.F.Doshi Science Degree College
INDI-586209. Dist: Vijayapur

## ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ವರದಿ

ದಿನಾಂಕ 06/06/2022 ರಂದು ಇಂಡಿ ಪಟ್ಟಣದ ಎಸ್.ಎಸ್.ವಿ.ವಿ.ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ 'ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮವು ಎನ್.ಎಸ್.ಎಸ್ ಹಾಗೂ ಯುವ ರೆಡ್ ಕ್ರಾಸ್ ಘಟಕಗಳಡಿಯಲ್ಲಿ ಜರುಗಿತು.

ಈ ಕಾರ್ಯಕ್ರಮದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ.ಎಸ್.ಬಿ.ಜಾಧವ ಅವರು ಸಸಿನೆಟ್ಟು ನೀರೆರೆದು ಮಾತನಾಡುತ್ತಾ "ಜಗತ್ತು ಇಂದು ಎದುರಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆ ಎಂದರೆ ಪರಿಸರ ಮಾಲಿನ್ಯವು ಭೂಮಿಯ ಮೇಲೆ ಸರಿಪಡಿಸಲಾಗದ ಸಮಸ್ಯೆಯನ್ನು ತಂದೊಡ್ಡುತ್ತಿದೆ. ಪರಿಸರ ಸಂರಕ್ಷಣೆ ಮಾಡಿಕೊಳ್ಳದೆ ಹೋದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ವಿನಾಶದ ಹಾದಿಯನ್ನು ತುಳಿಯುತ್ತೇವೆ. ಇದರಿಂದ ಮನುಷ್ಯರಲ್ಲಿ ಹೃದಯ ಹಾಗೂ ಉಸಿರಾಟದ ಸಂಬಂಧಿತ ಕಾಯಿಲೆ , ಕ್ಯಾನ್ಸರ್, ಹುಟ್ಟು ಸಬಂಧಿತ ರೋಗಗಳಂತಹ ಅನೇಕ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇನ್ನೂ ಅತ್ಯಂತ ಧಾರುಣವಾದ ಆಮ್ಲಜನಕದ ಕೊರತೆಯನ್ನು ಕೂಡಾ ಅನುಭವಿಸುವ ಪರಿಸ್ಥಿತಿ ಬಂದೊದಗಿದೆ. ಆದ್ದರಿಂದ ಪರಿಸರದ ಉಳಿವಿಗಾಗಿ ಪ್ರತಿಯೊಬ್ಬರೂ ಕಾಳಜಿವಹಿಸಬೇಕಾಗಿದೆ. ನಗರೀಕರಣ ಬೆಳೆದಂತೆ ಹಳ್ಳಿಗಳಲ್ಲಿಯೂ ಕೂಡಾ ದಿನೇ ದಿನೇ ಕಾಡು ಕಡಿದು ಕಾಂಕ್ರೀಟ್ ರಸ್ತೆಯಾಗುತ್ತಿವೆ. ಹೊಲ-ಗದ್ದೆ, ಕೆರೆಗಳನ್ನು ಅಳಿಸಿ ದೊಡ್ಡ ದೊಡ್ಡ ಮನೆ ನಿರ್ಮಿಸಲಾಗುತ್ತಿದೆ, ಪಟ್ಟಣಗಳಲ್ಲಿ ಕಾರ್ಖಾನೆಗಳು, ವಾತಾವರಣದಲ್ಲಿ ಹೆಚ್ಚುತ್ತಿರುವ ಬಿಸಿ, ನಿರಂತರ ವಾಯುಮಾಲಿನ್ಯ, ಜಲಮಾಲಿನ್ಯ, ಭೂಮಾಲಿನ್ಯದಿಂದಾಗಿ ಭೂಮಿಯನ್ನು ಉಳಿಸಿಕೊಳ್ಳಬೇಕಾಗಿದೆ. ರಾಜ್ಯದ ಎಲ್ಲಾ ಪ್ರಾಥಮಿಕ & ಪ್ರೌಢಶಾಲೆಗಳಲ್ಲಿ 'ಮಗುವಿಗೊಂದು ಮರ – ಶಾಲೆಗೊಂದು ವನ' ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಜಾರಿಗೊಳಿಸಿದೆ. ಇದು ಕೇವಲ ಶಾಲೆಗಳ ಕಾರ್ಯಕ್ರಮವಾಗದೆ ಪ್ರತಿಯೊಬ್ಬನ ಕರ್ತವ್ಯವಾಗಬೇಕು. ಪರಿಸರವನ್ನು ಉಳಿಸುವ ಸಾಮೂಹಿಕ ಪ್ರಯತ್ನವಾಗಬೇಕು ನಮ್ಮ ಮನೆ, ಶಾಲೆ, ಸಾರ್ವಜನಿಕ ಸ್ಥಳಗಳಲ್ಲಿ ಹಸರೀಕರಣಗೊಳಿಸುವ ಕೆಲಸ ಆಗಬೇಕು. ಈ ಭೂತಾಯಿಯ ರಕ್ಷಣೆ ನಮ್ಮೆಲ್ಲರ ಹೊಣೆ"ಎಂದು ಹೇಳಿದರು.

ಈ ಕಾರ್ಯಕ್ರಮದ ನಿರೂಪಣೆ ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಯಾದ ಡಾ.ವಿಶ್ವಾಸ ಕೋರವಾರ, ಡಾ.ಸಿ.ಎಸ್.ಬಿರಾದಾರ ಸ್ವಾಗತ ಹಾಗೂ ಪರಿಚಯವನ್ನು ನೆರವೇರಿಸಿದರು. ವಂದನಾರ್ಪಣೆ ಯುವ ರೆಡ್‌ಕ್ರಾಸ್ ಕಾರ್ಯಕ್ರಮ ಅಧಿಕಾರಿಯಾದ ಡಾ.ಸುರೇಂದ್ರ ಕೆ. ಅವರು ನಿರ್ವಹಿಸಿದರು.


ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ, ಡಾ.ಆನಂದ ನಡುವಿನಮನಿ, ಶ್ರೀ ಶ್ರೀಶೈಲ, ಡಾ.ಜಯಪ್ರಸಾದ ಡಿ, ಶ್ರೀ.ಮಲ್ಲಕಾರ್ಜುನ ಕೋಣದೆ, ಶ್ರೀ ಆರ್.ಪಿ. ಇಂಗನಾಳ ಹಾಗೂ ಬೋಧಕ /ಬೋಧಕೇತರರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Co-Ordinator
I.Q.A.C.
Shri G.R.Gandhi Arts, Shri Y.A.Patil Commerce
& Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Comme
& Shri M.F.Doshi Science Degree Colleg
INDI-586209. Dist: Vijayapur

INDI
5225




Co-Ordinator
I.Q.A.C.
G.R.Gandhi Arts, Shri Y.A.Patil Commerce
Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Comm
& Shri M.F.Doshi Science Degree Colle
INDI-586209. Dist: Vijayapur

# ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದ ವರದಿ

ದಿನಾಂಕ 08.03.2022 ರಂದು ನಗರದ ಪ್ರತಿಷ್ಠಿತ ಸಂಸ್ಥೆಯಾದ ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘದ ಶ್ರೀ ಜಿ.ಆರ್. ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಶಾಂತೇಶ್ವರ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಸಮಾರಂಭ ಜರುಗಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕುಮಾರಿ. ಎಸ್ .ಕೆ. ಭಾಗ್ಯಶ್ರೀ ಸಹಕಾರಿ ಸಂಘಗಳ ಸಹಾಯಕ ನಿಭಂಧಕರು ಇಂಡಿ. ಇವರು ಮಾತನಾಡುತ್ತ 'ಪ್ರತಿ ವರ್ಷ ಮಾರ್ಚ 8 ರಂದು ವಿಶ್ವ ಮಹಿಳಾ ದಿನಾಚರಣೆ ಆಚರಿಸುತ್ತೇವೆ ಅದು ಕೇವಲ ಮಹಿಳಾ ದಿನಾಚರಣೆ ಆಚರಿಸುದಾಗಬಾರದು ಮಹಿಳೆಯ ಬದುಕು ಕಟ್ಟಿಕೊಡುವ ಆಚರಣೆಯಾಗಬೇಕು ಇಂದಿನ ಸಮಾಜದಲ್ಲಿ ಪ್ರೋತ್ಸಾಹ, ನಿಂದನೆ, ಪ್ರೇರಣೆ ಎಲ್ಲವೂ ಇದೆ ನೀವು ನಡೆಯುವ ದಾರಿಯಲ್ಲಿ ಯಾವುದು ಸರಿ, ತಪ್ಪು ಎಂದು ನಿರ್ಧರಿಸು ಯೋಚನೆ ನಿಮ್ಮದಾಗಬೇಕು. ಅದಕ್ಕಾಗಿ ಮೌಲ್ಯಯುತವಾದ ಶಿಕ್ಷಣ ಬೇಕು ಈ ಅದರ ಕೊರತೆ ಎದ್ದು ಕಾಣುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಪ್ರಭಾಕರ ಎಸ್. ಬಗಲಿ ಗೌರವ ಕಾರ್ಯದರ್ಶಿಗಳು ಎಸ್.ಎಸ್.ವ್ಹಿ.ವ್ಹಿ ಸಂಘ ಇಂಡಿ ಇವರು ಹಿಂದಿನ ಕಾಲದಲ್ಲಿ ಮಹಿಳೆ ಅಡುಗೆ ಮನೆಗೆ ಮಾತ್ರಾ ಸೀಮಿತವಾಗಿದ್ದಳು ಆದರೆ ಈಗ ಕಾಲ ಬದಲಾವಣೆಯಾಗಿದೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎಲ್ಲಾ ರಂಗದಲ್ಲಿಯೂ ಮುಂಚುಣಿಯಲ್ಲಿದ್ದಾಳೆ ರಾಜಕೀಯ, ಆಡಳಿತ, ಶೈಕ್ಷಣಿಕ ,ಕ್ರೀಡೆ ,ಮುಂತಾದ ಕ್ಷೇತ್ರದಲ್ಲಿಯೂ ಪುರುಷನಿಗೆ ಸಮನಾಗಿ ನಿಂತಿದ್ದಾಳೆ ಆದರೂ ಹೆಣ್ಣಿನ ಮೇಲಿನ ಶೋಷಣೆ ನಿಂತಿಲ್ಲ ಇದು ನಿಂತಾಗ ಮಾತ್ರ ಮಹಿಲಾ ದಿನಾಚರಣೆಗೆ ನಿಜವಾದ ಅರ್ಥ ಸಿಗುತ್ತದೆ. "ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ" ಎಂಬ ಥೀಮಗೆ ಅರ್ಥ ಸಿಗುತ್ತದೆ ಎಂದು ನುಡಿದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರೊ.ಎಸ್.ಬಿ.ಜಾಧವ ಪ್ರಾಂಶುಪಾಲರು ಮಾತನಾಡುತ್ತಾ ಪ್ರಸ್ತುತ ದಿನಮಾನಗಳಲ್ಲಿ ಹೆಣುಮಕ್ಕಳ ಬಗ್ಗೆ ಕಿಳರಿಮೆ ಇದೆ ಇದನ್ನು ಅರಿತುಕೊಮಡು ಅವರಿಗೆ ಗೌರವಿಸುವ ನಿಟ್ಟಿನಲ್ಲಿ ಪುರುಷರ ಸಮಾಜದ ಮನಸ್ಸು ಮಾಡಬೇಕಾಗಿದೆ ಎಂದರೂ


ಕಾರ್ಯಕ್ರಮದ ನಿರೂಪಣೆಯನ್ನು ಕುಮಾರಿ ಲಕ್ಷ್ಮೀ ಬನಸೊಡೆ, ಸ್ವಾಗತ ಶ್ರೀಮತಿ. ಸುಮಾ ಪಾಟೀಲ, ಪರಿಚಯ ಸಹಾಯಕ ಪ್ರಾಧ್ಯಾಪಕರಾದ ಡಾ.ಸುರೇಂದ್ರ ಕೆ. ವಂದನಾರ್ಪಣೆಯನ್ನು ಕುಮಾರಿ ನಿಖತ್ ತೆನ್ನಿಹಳ್ಳಿ ಅವರು ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ ವೃಂದ ಉಪಸ್ಥಿತರಿದ್ದರು.

Co-Ordinator
I.Q.A.C.
R.Gandhi Arts, Shri Y.A.Patil Commerce
ri M.F.Doshi Science Degree College,
INDI-586209. Dist: Vijayapur

Principal
Shri G.R.Gandhi Arts, Shri Y.A.Patil Comm
& Shri M.F.Doshi Science Degree College
INDI-586209. Dist: Vijayapur




Co-Ordinator
I.Q.A.C.
G.R.Gandhi Arts, Shri Y.A.Patil Commerce
Shri M.F.Doshi Science Degree College,
INDI-586209. Dist: Vijayapur.

Principal
Shri G.R.Gandhi Arts, Shri Y.A.Patil Comm
& Shri M.F.Doshi Science Degree College
INDI-586209. Dist: Vijayapur